



ಆಗುಂಬೆಯಲ್ಲಿ. ಮಳೆಯೂರು ಆಗುಂಬೆಯನ್ನೇ ಆರ್.ಕೆ. ನಾರಾಯಣ್‌ರ ಕಾಲ್ಪನಿಕ ಊರು ಮಾಲ್ಗುಡಿಯಾಗಿ ಶಂಕರ್‌ನಾಗ್ ಪರಿವರ್ತಿಸಿದ್ದರು. ಕಥೆಯಲ್ಲಿ ಬರುವ ರೈಲ್ವೆ ನಿಲ್ದಾಣದ ಚಿತ್ರಣವನ್ನು, ಆಗುಂಬೆಯಲ್ಲಿ ರೈಲ್ವೆ ವ್ಯವಸ್ಥೆ ಇಲ್ಲದ ಕಾರಣ ಹೊಸನಗರ ತಾಲೂಕಿನ ಅರಸಾಳಿನಲ್ಲಿ ನಡೆಸಿದ್ದರು. ಶಿವಮೊಗ್ಗ–ಹೊಸನಗರದ ಮಧ್ಯೆ ಇರುವ, ರಿಪ್ಪನ್‌ಪೇಟೆ ಸಮೀಪದ ಅರಸಾಳಿನ ರೈಲ್ವೆ ನಿಲ್ದಾಣ, ಧಾರಾವಾಹಿಯ ಒಂದು ಪಾತ್ರವೇ ಆಗಿತ್ತು. ಇದರ ಸುಂದರ ಸವಿನೆನಪನ್ನು ಹಸಿರಾಗಿಡುವ ಪ್ರಯತ್ನವನ್ನು ದಕ್ಷಿಣ ಮಧ್ಯ ರೈಲ್ವೆ ಅದ್ಭುತವಾಗಿ ಮಾಡಿದೆ. ನವೀಕರಣಗೊಂಡಿರುವ ರೈಲ್ವೆ ನಿಲ್ದಾಣದ ಪಕ್ಕದಲ್ಲಿಯೇ ಇರುವ ಹಳೆಯ ರೈಲ್ವೆ ನಿಲ್ದಾಣವನ್ನು 'ಮಾಲ್ಗುಡಿ ಮ್ಯೂಸಿಯಂ' ಆಗಿ ಪರಿವರ್ತಿಸಲಾಗಿದೆ.

'ಮಾಲ್ಗುಡಿ ಮ್ಯೂಸಿಯಂ'ನಲ್ಲಿ ಧಾರಾವಾಹಿಯ ಕಥೆಗಾರ ಆರ್.ಕೆ. ನಾರಾಯಣ್ ಅವರ ಛಾಯಾಚಿತ್ರಗಳು, ನಿರ್ದೇಶಕ ಶಂಕರನಾಗ್‌ರ ಪುತ್ಥಳಿ ಹಾಗೂ ಮಾಲ್ಗುಡಿಯ ನರಭಕ್ಷಕ ಹುಲಿಯ ಪುತ್ಥಳಿಗಳಿವೆ. ಧಾರಾವಾಹಿಯ ಪ್ರಮುಖ ಪಾತ್ರವಾದ ಸ್ವಾಮಿ ಹಾಗೂ ಅವನ ಸ್ನೇಹಿತರಾದ ಮಣಿ, ರಾಜಮ್ ಮುಂತಾದವರ



ಆಕರ್ಷಕ ಪ್ರತಿಮೆಗಳನ್ನೂ ಸಂಗ್ರಹಾಲಯದಲ್ಲಿ ಅಚ್ಚುಕಟ್ಟಾಗಿ ಪ್ರದರ್ಶಿಸಲಾಗಿದೆ. ಅಂದಿನ ಕಾಲದ ಟಿಕೆಟ್ ಕೌಂಟರ್, ಹಳೆಯ ರೈಲ್ವೆ ಇಂಜಿನ್ ಮುಂತಾದವುಗಳನ್ನೂ ಅಚ್ಚುಕಟ್ಟಾಗಿ ಜೋಡಿಸಿಡಲಾಗಿದೆ.

ಮಲೆನಾಡ ಭಾಗದಲ್ಲಿ ಉಪಯೋಗಿಸುವ ಕೃಷಿ ಉಪಕರಣಗಳು, ಬೀಸೋಕಲ್ಲು ಮುಂತಾದವುಗಳನ್ನು ಸಂಗ್ರಹಿಸುವ ಮೂಲಕ 'ಮಾಲ್ಗುಡಿ ಮ್ಯೂಸಿಯಂ'ಗೆ ಸ್ಥಳೀಯ ಮೆರುಗು ನೀಡಲಾಗಿದೆ. ಧಾರಾವಾಹಿಯ ಪ್ರಮುಖ ದೃಶ್ಯಗಳ ಚಿತ್ರಗಳು, ಪಾತ್ರಗಳು ಗೋಡೆಯಲ್ಲಿ ಅರಳಿವೆ. ಧಾರಾವಾಹಿಗೆ ಜೀವತುಂಬುವಂತಹ ರೇಖಾಚಿತ್ರಗಳನ್ನು ರಚಿಸಿದ್ದ ಆರ್.ಕೆ. ಲಕ್ಷ್ಮಣ್ ಅವರ 'ಕಾಮನ್ ಮ್ಯಾನ್' ಸೇರಿದಂತೆ ಹಲವು ಚಿತ್ರಗಳು ಪ್ರದರ್ಶನಗೊಂಡಿವೆ. 'ಮಾಲ್ಗುಡಿ ಡೇಸ್' ದೃಶ್ಯಕಾವ್ಯದ ನೆನಪು ಮರುಕಳಿಸುವಂತೆ ಮಾಡುವ ಸಲುವಾಗಿ ಟೀವಿ ಇರಿಸಲಾಗಿದ್ದು, ಅದರಲ್ಲಿ ಧಾರಾವಾಹಿಯ ಕಂತುಗಳು ಮೂಡಿಬರುವ ವ್ಯವಸ್ಥೆಯೂ ಇದೆ.

ರೈಲ್ವೇ ಬೋಗಿಯೊಂದನ್ನು ಪ್ಲಾಟ್‌ಫಾರ್ಮ್ ಮೇಲೆ ನಿಲ್ಲಿಸಿ 'ಮಾಲ್ಗುಡಿ ಚಾಯ್' ಹೆಸರಿನ ಟೀ ಶಾಪ್ ಮಾಡಲಾಗಿದೆ. ಎಂದೂ ಓಡದ ಬೋಗಿಯಲ್ಲಿ ಕುಳಿತು ಸುತ್ತಮುತ್ತಲ ಮಲೆನಾಡಿನ ಗಿಡ ಮರಗಳನ್ನು ನೋಡಿದ ನಂತರ 'ಮಾಲ್ಗುಡಿ ಪ್ರವಾಸ' ಮುಗಿಯುತ್ತದೆ. ಅಂದಹಾಗೆ, 'ಮಾಲ್ಗುಡಿ ಡೇಸ್' ಧಾರಾವಾಹಿಯ ಕಲಾ ನಿರ್ದೇಶಕರಾಗಿದ್ದ ಜಾನ್ ದೇವರಾಜ್ 'ಮಾಲ್ಗುಡಿ ಮ್ಯೂಸಿಯಂ' ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕಲೆ, ಸಾಹಿತ್ಯ, ಸಂಸ್ಕೃತಿಗಳ ನೆನಪಿನ ಹೊತ್ತಿಗೆಯಂತೆ ಗೋಚರಿಸುವ ಈ 'ಮಾಲ್ಗುಡಿ ಮ್ಯೂಸಿಯಂ' ನಿರ್ಮಿಸಿರುವ ರೈಲ್ವೆ ಇಲಾಖೆಯ ಪರಿಶ್ರಮ ಶ್ಲಾಘನೀಯ.

ಪ್ರತಿಕ್ರಿಯಿಸಿ: feedback@sudha.co.in